5 ವರ್ಷಗಳ ಅವಧಿಗೆ ಗುತ್ತಿಗೆ ಮಂಜೂರಾಗಿದ್ದು, ಸದರಿ ಪ್ರದೇಶದಲ್ಲಿ ಹರಿಜನ ಕೇರಿಯ ಕುಟುಂಬದವರು ಮರಳು ತುಂಬಿ ಜೀವನ ಸಾಗಿಸುತ್ತಿದ್ದರು. ದಿ: 16-10-2000ದ ಆದೇಶ ಸಂಖ್ಯೆ :ಸಿಐ 02 ಎಂಎಂಎನ್ 98(1) ರಂತೆ ಮರಳು ಗುತ್ತಿಗೆಯನ್ನು ಹರಾಜು ಮೂಲಕ ನೀಡಲು ಸರ್ಕಾರವು ನಿರ್ಧರಿಸಿದ್ದರಿಂದ, ಸದರಿ ಗುತ್ತಿಗೆಯನ್ನು ನವೀಕರಿಸಿರುವುದಿಲ್ಲ.

ಸ್ಥಳೀಯ ಮಾದಿಗರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಶ್ರೀ ಪರಸಪ್ಪ ದಾಸನಕೇರಿ ಇವರು ಹಾವನೂರು ಗ್ರಾಮ ವ್ಯಾಪ್ತಿಯಲ್ಲಿ ಎರಕದ ಮರಳಿನ ಗಣಿಗುತ್ತಿಗೆಗಾಗಿ ಅರ್ಜಿಯನ್ನು ಸಲ್ಲಿಸಿದ್ದು, ಪರಿಶೀಲಿಸಲಾಗುತ್ತಿದೆ.

ಶ್ರೀ ಜ್ಯೋತಿಮೃತ್ಯುಂಜಯ, ಹೊಳಲು, ಇವರು ತುಂಗಭದ್ರಾ ನದಿ ಪಾತ್ರದಲ್ಲಿ 6,000 ಎಕರೆ ಪ್ರದೇಶದ ಗಣಿಗುತ್ತಿಗೆಗಾಗಿ ಅರ್ಜಿ ಸಲ್ಲಿಸಿದ್ದು, ಹಾವನೂರು ಗ್ರಾಮವೂ ಸಹ ಈ ಪ್ರದೇಶದ ವ್ಯಾಪ್ತಿಗೆ ಬರುತ್ತದೆ. ಈ ಕುರಿತು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ W.P.No- 49376/04 ರಲ್ಲಿ ದಿ: 22-06-07 ರಲ್ಲಿನ ತೀರ್ಪಿನಂತೆ ಇವರ ಅರ್ಜಿಯನ್ನು ಇತ್ಯರ್ಥಗೊಳಿಸಿದ ನಂತರ ಶ್ರೀ ಪರಸಪ್ಪ ದಾಸನಕೇರಿ ಇವರ ಎರಕದ ಮರಳಿನ ಗಣಿಗುತ್ತಿಗೆ ಅರ್ಜಿಯ ಕುರಿತು ಕ್ರಮಕೈಗೊಳ್ಳಲಾಗುವುದು. ಆನಂತರ, ಉಳಿದ ಪ್ರದೇಶದಲ್ಲಿ ಸಾಧಾರಣ ಮರಳು ಗುತ್ತಿಗೆ ಹರಾಜು ಮಾಡುವ ಬಗ್ಗೆ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.

ಇ) ಶ್ರೀ ಜ್ಯೋತಿಮೃತ್ಯುಂಜಯ ಮತ್ತು ಶ್ರೀ ಪರಸಪ್ಪ ದಾಸನಕೇರಿ ಇವರ ಅರ್ಜಿಗಳು ಇತ್ಯರ್ಥವಾದ ನಂತರ ಉಳಿದ ಸಾಧಾರಣ ಮರಳು ಪ್ರದೇಶಗಳನ್ನು ಬಹಿರಂಗ ಹರಾಜಿನ ಮೂಲಕ ವಿಲೇ ಮಾಡಲಾಗುವುದು.

647 ಶ್ರೀ ಪುಟ್ಟರಂಗಶೆಟ್ಟಿ.ಸಿ. : ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ಪಟ್ಟಣದಲ್ಲಿ ಒಳಚರಂಡಿ ಕಾಮಗಾರಿಗೆ ಸರ್ಕಾರ ಮಂಜೂರಾತಿ ನೀಡಿದೆಯೇ;

ಆ) ಹಾಗಿದ್ದಲ್ಲಿ, ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು;

ಇ) ಇದಕ್ಕೆ ಬಿಡುಗಡೆಯಾದ ಹಣವೆಷ್ಟು;

ಈ) ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ. ಬಾಲಚಂದ್ರ ಲ. ಜಾರಕಿಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವರು) :

ಅ) ಚಾಮರಾಜನಗರ ಒಳಚರಂಡಿ ಕಾಮಗಾರಿಯನ್ನು ಏಷ್ಯಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ ಹಾಗೂ ರೂ. 19.20 ಕೋಟಿಗಳನ್ನು ಮೀಸಲಿಡಲಾಗಿದೆ.

ಆ) ಚಾಮರಾಜನಗರ ಪಟ್ಟಣಕ್ಕೆ ವಿಸ್ತೃತ ಯೋಜನೆ ಸಿದ್ದಪಡಿಸಿದ್ದು, ಇದು ಅನುಮೋದನೆಗೊಂಡ ನಂತರ ಪ್ರಾರಂಭಿಸಲಾಗುವುದು.

ಇ) ಹಣ ಬಿಡುಗಡೆಯಾಗಿರುವುದಿಲ್ಲ.

ಈ) ವಿಸ್ತೃತ ಯೋಜನೆ ಅನುಮೋದನೆಗೊಂಡ ನಂತರ ಪ್ರಾರಂಭಿಸ ಲಾಗುವುದು.

96 ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ ಸದಲಗ) : ಮಾನ್ಯ ಪೌರಾಡಳಿತ ಸ್ಥಳೀಯ ಸಂಸ್ಥೆಗಳ ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಿನಾಂಕ: 22–07–2008ರ ಸರ್ಕಾರಿ ಸಂಖ್ಯೆ: ನಅಇ–ಎಸ್‌ಎಫ್‌ಸಿ/2008ರ ಅನ್ವಯ ಚಿಕ್ಕೋಡಿ ಪುರಸಭೆ ಹಾಗೂ ಸದಲಗ ಪಟ್ಟಣ ಪಂಚಾಯತಿಗೆ ಬಿಡುಗಡೆ ಮಾಡಿರುವ ಅನುದಾನದ ಮೊತ್ತವೆಷ್ಟು;

ಆ) ಈ ಅನುದಾನದಲ್ಲಿ ಚಿಕ್ಕೋಡಿ ಪುರಸಭೆ ಹಾಗೂ ಸದಲಗ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಯಾವ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ(ವಿವರ ನೀಡುವುದು);

ಇ) ಈ ಅನುದಾನವನ್ನು ಪೂರ್ಣ ಬಳಕೆ ಮಾಡಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು?

ಪೌರಾಡಳಿತ ಸ್ಥಳೀಯ ಸಂಸ್ಥೆಗಳ ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು :

ಅ) ದಿನಾಂಕ: 22–7–2008ರ ಎಸ್.ಎಫ್.ಸಿ. ಅನುದಾನ ಹಂಚಿಕೆಯ ಸರ್ಕಾರಿ ಆದೇಶ ಸಂ:ನಇ 21 ಎಸ್‌ಎಫ್‌ಸಿ 2008ರ ಅನ್ವಯ ಚಿಕ್ಕೋಡಿ ಪುರಸಭೆ ಮತ್ತು ಸದಲಗಾ ಪಟ್ಟಣ ಪಂಚಾಯತಿಗೆ ಈ ಕೆಳಗಿನಂತೆ ಅನುದಾನ ಬಿಡುಗಡೆಗೆ ನಿಗದಿಗೊಳಿಸಿದೆ.